ದಿನಾಕಃ06-03-2020 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಕೆ ಸಿ ಬಿ ವಕೀಲರವರಿಂದಃ**

ಘಟನೆ ನಡೆದ ದಿನ ನಾನು 7-00 ಗಂಟೆಗೆ ಕೆಬ್ಬೆಕೊಪ್ಪಲಿನಿಂದ ಹುಣಸೂರಿಗೆ ಬಸ್ಸ ಹತ್ತಿರುತ್ತೇನೆ. ಆ ದಿನ ನಾನು ಟಿಕೇಟ್ ತೆಗೆದುಕೊಂಡಿರುತ್ತೇನೆ. ಪೋಲಿಸರು ವಿಚಾರಣೆ ಮಾಡುವ ಸಮಯದಲ್ಲಿ ನನ್ನಿಂದ ಟಿಕೆಟ್ ತೆಗೆದುಕೊಂಡಿರುವುದಿಲ್ಲ, ಸದರಿ ಬಸ್ಸಿನಲ್ಲಿ ಸುಮಾರು 20 ಜನ ಪ್ರಯಾಣಿಕರಿದ್ದರು. 7-10 ಗಂಟೆಗೆ ಬಸ್ಸು ಕೆಬ್ಬೆಕೊಪ್ಪಲಿಗೆ ತಲುಪಿರುತ್ತದೆ. ಕೆಬ್ಬೆಕೊಪ್ಪಲಿನಲ್ಲಿ ಇಬ್ಬರೂ ಪ್ರಯಾಣಿಕರು ಇಳಿದುಕೊಂಡರು ಆದರೆ ಯಾರು ಹತ್ತಲಿಲ್ಲ. ಕೆಬ್ಬೆಕೊಪ್ಪಲಿನಲ್ಲಿ 30 ನಿಮಿಷ ಬಸ್ಸನ್ನು ನಿಲ್ಲಿಸಲಾಯಿತು. 8-30 ಗಂಟೆಗೆ ಬಸ್ಸು ಹುಣಸೂರಿಗೆ ಬಂದಿರುತ್ತದೆ. ಆ ದಿನ ನಾನು ಹುಣಸೂರಿಗೆ ಬಂದಿರುತ್ತೇನೆ. ಆ ದಿನ ನಾನು ನಮ್ಮ ಸಂಬಂಧಿಕರು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಿರುವುದರಿಂದ ನಾನು ಆಸ್ಪತ್ರೆಯಲ್ಲಿ ಉಳಿದುಕೊಂಡೆನು. ನಮ್ಮ ಸಂಬಂಧಿಕರು ಆಸ್ಪತ್ರೆಯಲ್ಲಿ ದಾಖಲಿದ್ದು ನಾನು ಅವರಿಗೆ ಊಟವನ್ನು ತೆಗೆದುಕೊಂಡು ಬಂದಿರುತ್ತೇನೆಂದು ಪೋಲಿಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ. ಚಾಸಾ-5 ನನ್ನ ದೊಡ್ಡಪ್ಪ. ನಮ್ಮ ದೊಡ್ಡಪ್ಪನಿಗೆ ಒಬ್ಬ ಮಗ ಹಾಗೂ 4 ಜನ ಹೆಣ್ಣು ಮಕ್ಕಳಿರುತ್ತಾರೆ. ಚಾಸಾ-5 ರ ಮಗಳನ್ನು ಚಾಸಾ-1 ರವರಿಗೆ ಕೊಟ್ಟು ಸುಮಾರು ವರ್ಷಗಳ ಹಿಂದೆ ಮದುವೆ ಮಾಡಿರುತ್ತಾರೆ. ಚಾಸಾ-3 ನನ್ನ ಮಾವನ ಮಗ.

ಚಾಸಾ-6 ನನ್ನ ದೊಡ್ಡಪ್ಪನ ಮಗ. ಚಾಸಾ-7 ಯಾರು ಎಂದು ನನಗೆ ಗೊತ್ತಿಲ್ಲ. 7-10 ಗಂಟೆ ಸಮಯದಲ್ಲಿ ಗಲಾಟೆ ಶುರುವಾಯಿತು. ಆರೋಪಿಗಳು ಹೊಡೆದು ಓಡಿ ಹೋದರು. 1 ನೇ ಆರೋಪಿ ಕೈಯಿಂದ ಚಾಸಾ-1 ರವರನ್ನು ಮುಖಕ್ಕೆ ಹೊಡೆದಿರುತ್ತಾನೆ. ಜನ ಕುಡಿದ ತಕ್ಷಣ ಅಲ್ಲಿಂದ ಪರಾರಿಯಾದನು. 2 ನೇ ಆರೋಪಿ ಚಾಸಾ-1 ರವರನ್ನು ಕೈಯಿಂದ ಮುಂದೆಲೆಗೆ ಹೊಡೆದಿರುತ್ತಾನೆ. 3 ನೇ ಆರೋಪಿ ಚಾಸಾ-1 ರವರನ್ನು ಕೈಯಿಂದ ಬುಜಕ್ಕೆ ಹೊಡೆದಿರುತ್ತಾನೆ. 4 ನೇ ಆರೋಪಿ ಚಾಸಾ-1 ರವರನ್ನು ಕೈಯಿಂದ ಬೆನ್ನಿಗೆ ಹೊಡೆದಿರುತ್ತಾನೆ.

1 ನೇ ಆರೋಪಿ ಕೈಯಿಂದ ಚಾಸಾ-1 ರವರನ್ನು ಮುಖಕ್ಕೆ ಹೊಡೆದಿರುತ್ತಾನೆ. ಜನ ಕುಡಿದ ತಕ್ಷಣ ಅಲ್ಲಿಂದ ಪರಾರಿಯಾದನು. 2 ನೇ ಆರೋಪಿ ಚಾಸಾ-1 ರವರನ್ನು ಕೈಯಿಂದ ಮುಂದೆಲೆಗೆ ಹೊಡೆದಿರುತ್ತಾನೆ. 3 ನೇ ಆರೋಪಿ ಚಾಸಾ-1 ರವರನ್ನು ಕೈಯಿಂದ ಬುಜಕ್ಕೆ ಹೊಡೆದಿರುತ್ತಾನೆ. 4 ನೇ ಆರೋಪಿ ಚಾಸಾ-1 ರವರನ್ನು ಕೈಯಿಂದ ಬೆನ್ನಿಗೆ ಹೊಡೆದಿರುತ್ತಾನೆ ಎಂದು ನಾನು ಪೊಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿಯು ಸ್ವಲ್ಪ ಸಮಯದ ನಂತರ ನಾನು ಈ ರೀತಿ ವಕೀಲರಿಗೆ ಹೇಳಿಕೆ ಕೊಟ್ಟಿರುತ್ತೇನೆ ಪೋಲಿಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಎಷ್ಟು ಸಲ ಹೊಡೆದರು ಎಂದು ನನಗೆ ನೆನಪಿರುವುದಿಲ್ಲ. ನಮ್ಮ ಸಂಬಂಧಿಕರು ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಿದ್ದರು. ನಾನು ಆಸ್ಪತ್ರೆಯಲ್ಲಿ ಇದ್ದಾಗ ಪೋಲಿಸರು ನನ್ನ ಬಳಿ ಬಂದು ಹೇಳಿಕೆ ಪಡೆದಿರುವುದಿಲ್ಲ. ಚಾಸಾ-1 ರವರಿಗೆ ಆರೋಪಿಗಳು ಹೊಡೆದಿರುವುದರಿಂದ ಯಾವುದೇ ರಕ್ತ ಬಂದಿರುವುದಿಲ್ಲ ಆದರೆ ಬಟ್ಟೆ ಹರೆದು ಹೊಗಿತ್ತು. ಕೆಬೆಕೊಪ್ಪಲಿನಲ್ಲಿ ಬಸ್ ನಿಲ್ದಾನ್ ಇರುತ್ತದೆ. ಕೆಬ್ಬೆಕೊಪ್ಪಲಿನಿಂದ ನಮ್ಮ ಊರಿಗೆ 1-00 ಕಿ. ಮೀ ಅಂತರ ಇರುತ್ತದೆ. ಕೆಬ್ಬೆಕೊಪ್ಪಲಿನಿಂದ ಹುಣಸೂರಿಗೆ 10-00 ಕಿ. ಮೀ ಅಂತರ ಇರುತ್ತದೆ. ಸುಮಾರು 4-5 ವರ್ಷಗಳಿಂದ ಅದೇ ರೂಟಿನಲ್ಲಿ ನನ್ನ ಭಾವನಾದ ಚಾಸಾ-1 ರವರು ಬಸ್ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸದರಿ ದಿನ ನನ್ನ ಬಿಟ್ಟು ಬೇರೆ ಪ್ರಯಾಣಿಕರ ಹೆಸರು ನನಗೆ ಗೊತ್ತಿಲ್ಲ ಹಾಗೂ ಅವರ್ಯಾರು ನನಗೆ ಪರಿಚಯ ಇರುವುದಿಲ್ಲ.

1 ನೇ ಆರೋಪಿ ಕೈಯಿಂದ ಚಾಸಾ-1 ರವರನ್ನು ಮುಖಕ್ಕೆ ಹೊಡೆದಿರುತ್ತಾನೆ. ಜನ ಕುಡಿದ ತಕ್ಷಣ ಅಲ್ಲಿಂದ ಪರಾರಿಯಾದನು. 2 ನೇ ಆರೋಪಿ ಚಾಸಾ-1 ರವರನ್ನು ಕೈಯಿಂದ ಮುಂದೆಲೆಗೆ ಹೊಡೆದಿರುತ್ತಾನೆ. 3 ನೇ ಆರೋಪಿ ಚಾಸಾ-1 ರವರನ್ನು ಕೈಯಿಂದ ಬುಜಕ್ಕೆ ಹೊಡೆದಿರುತ್ತಾನೆ. 4 ನೇ ಆರೋಪಿ ಚಾಸಾ-1 ರವರನ್ನು ಕೈಯಿಂದ ಬೆನ್ನಿಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಹಾಗೂ ಗಲಾಟೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಸುಳ್ಳು ಪೀರ್ಯಾಧಿಯನ್ನು

ಸಲ್ಲಿಸಿದ್ದು ಹಾಗೂ ಅವರು ನಮ್ಮ ಭಾವನಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಯಾವ ದಿನಾಂಕ ಹಾಗೂ ದಿನದಂದು ಮಹಾಜರ್ ನಿಪಿ-2 ಕ್ಕೆ ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಪಿ-2 ಕ್ಕೆ ನನ್ನನ್ನು ಬಿಟ್ಟು ಚಾಸಾ-3 , ಚಾಸಾ-6 ಹಾಗೂ ಸಣ್ಣಪ್ಪಯ್ಯ ರವರು ಸಹಿ ಮಾಡಿರುತ್ತೇವೆ. ನಿಪಿ-2 ನ್ನು ಎಲ್ಲಿ ಬರೆದುಕೊಂಡು ಬಂದಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ಬರೆದಿರುವ ವಿಚಾರ ನನಗೆ ಗೊತತ್ತಿಲ್ಲ. ನಿಪಿ-2 ಕ್ಕೆ ಪೋಲಪಿಸರು ಸ್ಥಳಕ್ಕೆ ಬಂದು ಯಾವುದೇ ಮಹಾಜರ್ ಕ್ರಮ ಜರುಗಿಸಿಲ್ಲ ನಾವೇ ಪೋಲಿಸ್ ಠಾಣೆಗೆ ಹೋಗಿ ಸಹಿ ಹಾಕಿರುತ್ತೇವೆಂದರೆ ಸರಿ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು